# ಅಲುಗಾಡದ ಬೆಣ್ಣೆಮುದ್ದೆ!

ತಮಿಳುನಾಡಿನ ಮಹಾಬಲಿಪುರಂ ಸಮೀಪದಲ್ಲಿ ದೊಡ್ಡದೊಂದು ಕಲ್ಲುಗುಂಡಿದೆ. ತಪಸ್ಸು ಮಾಡುವಂತೆ ಸಾವಿರಾರು ವರ್ಷಗಳಿಂದ ಒಂದೇ ಕಡೆ ಈ ಕಲ್ಲನ್ನು 'ಶ್ರೀಕೃಷ್ಣನ ಬೆಣ್ಣೆಮುದ್ದೆ' ಎನ್ನುವ ಹೆಸರಿದೆ.

■ ಶ್ರೀರಂಗ ವೆಂ. ಕಟ್ಟಿ ಯಲ್ಲಾಪುರ



ತಮಿಳುನಾಡಿನ ಮಹಾಬಲಿಪುರಂ (ಮಾಮಲ್ಲಾಪುರಂ) ನಗರದ ಹೊರವಲಯದಲ್ಲಿ ಸಾವಿರಾರು ವರ್ಷಗಳಿಂದ ಬೆಣ್ಣೆಮುದ್ದೆಯೊಂದು ಅಲುಗಾಡದೇ ನಿಂತುಕೊಂಡಿದೆ! ಆದರೆ ಇದು ಮಜ್ಜಿಗೆಯಿಂದ ಹೊರಬಂದ ಬೆಣ್ಣೆಮುದ್ದೆಯಲ್ಲ. ಬೃಹತ್ ಗಾತ್ರದ ಕಲ್ಲಿನ ಬೆಣ್ಣೆಮುದ್ದೆ! 'ಶ್ರೀಕೃಷ್ಣನ ಬೆಣ್ಣೆಮುದ್ದೆ' ಎಂದೇ ಕರೆಸಿಕೊಳ್ಳುವ ಈ ಬಂಡೆ ಪ್ರವಾಸಿಗರ ಆಕರ್ಷಣೆಯ ಕೇಂದ್ರಬಿಂದುವಾಗಿ ನಿಂತುಕೊಂಡಿದೆ.

ಯಾವುದೇ ಆಧಾರವಿಲ್ಲದೇ ಬೆಟ್ಟದ ಇಳಿಜಾರಿನಲ್ಲಿ ಆಶ್ಚರ್ಯಕರ ರೀತಿಯಲ್ಲಿ ನಿಂತುಕೊಂಡಿರುವ ಈ ಬಂಡೆಗಲ್ಲಿಗೆ ಅದರದ್ದೇ ಆದ ಇತಿಹಾಸವಿದೆ. ಆರನೇ ಶತಮಾನದಲ್ಲಿ ಆಳಿದ ಪಲ್ಲವರ ರಾಜ ನರಸಿಂಹವರ್ಮನ್ ಇದನ್ನು ಅಲುಗಾಡಿಸುವ ವಿಫಲ ಯತ್ನ ನಡೆಸಿದ್ದ. 1908ರಲ್ಲಿ ಅಂದಿನ ಗವರ್ನರ್ ಆರ್ಥರ್ ಹ್ಯಾವಲಾಕ್ ಜನರ ಸುರಕ್ಷೆಯ ದೃಷ್ಟಿಯಿಂದ ಈ ಬೆಣ್ಣೆಮುದ್ದೆಯನ್ನು ಬೇರೆಡೆಗೆ ಸ್ಥಳಾಂತರಿಸಲು ಏಳು ಆನೆಗಳನ್ನು ಬಳಸಿದರೂ ಇದನ್ನು ಅಲುಗಾಡಿಸಲಾಗಲಿಲ್ಲ ಎಂಬ ಬಗ್ಗೆ ದಾಖಲೆಗಳಿವೆ!

2019ರಲ್ಲಿ ಪ್ರಧಾನಮಂತ್ರಿ ಮೋದಿ ಮತ್ತು ಚೀನಾ ಅಧ್ಯಕ್ಷ ಕ್ಷೀ ಜಿನಪಿಂಗ್ ಇದರ ಎದುರು ಕೈಕುಲುಕಿ ಫೋಟೊ ತೆಗೆಸಿಕೊಂಡಿದ್ದಾರೆ.

ಆರು ಮೀಟರ್ ಎತ್ತರದ ಈ ಬಂಡೆ ಸುಮಾರು 250 ಟನ್ ತೂಕವಿದ್ದು, 1400 ವರ್ಷಗಳಿಂದ ಒಂದೇ ಸ್ಥಳದಲ್ಲಿ ನಿಂತುಕೊಂಡಿದೆ ಎಂದು ಹೇಳಲಾಗುತ್ತಿದೆ. ಯಾವುದೇ ಕ್ಷಣದಲ್ಲಿ ಕೆಳಗೆ ಉರುಳಬಹುದು ಎಂದು ಭಾಸವಾಗುವ ರೀತಿಯಲ್ಲಿರುವ ಈ ಬಂಡೆಗಲ್ಲು ಕೇವಲ ನಾಲ್ಕು ಅಡಿ ತಳಭಾಗದ ಆಧಾರದ ಮೇಲೆ ನಿಂತುಕೊಂಡಿದೆ!

ಸಮುದ್ರ ದಂಡೆಯ ಮರಳು ಮಿಶ್ರಿತ ಮಣ್ಣಿನ ಕಣಗಳು ಗಾಳಿಯ ಹೊಡೆತಕ್ಕೆ ಹಾರಿಬಂದ ಪರಿಣಾಮವಾಗಿ ಇಂಥ ಬೃಹತ್ ಬಂಡೆ ನಿರ್ಮಾಣವಾಗಿರಬಹುದು ಎಂಬುದು ಭೂಗರ್ಭಶಾಸ್ತ್ರಜ್ಞರ ಅನಿಸಿಕೆ. ■

